**ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ., ರವರ ನ್ಯಾಯಾಲಯ ತಿ.ನರಸೀಪುರ.**

**ಸಿ ಸಿ ನಂ.714/2019**

| | | |
|---|---|---|
| ಸಾಕ್ಷಿದಾರರ ಹೆಸರುಃ | ಎಂ.ಲೊಕೇಶ | ಸಿ ಡಬ್ಲ್ಯೂಃ 1 |
| ತಂದೆಯ ಹೆಸರುಃ | ಲೇಟ್ ಎಂ.ಎಸ್ ಮಾರ್ತಾಂಡಮೂರ್ತಿ | ಪಿ ಡಬ್ಲ್ಯೂಃ 1 |
| ವಯಸ್ಸುಃ | 41 ವರ್ಷ | |
| ಉದ್ಯೋಗಃ | ಖಾಸಗಿ ಕೆಲಸ | ಪ್ರ.ವ .ಬೋ.ದಿಃ |
| ವಾಸಸ್ಥಳಃ | ಹಾಲಿ ವಾಸಃ ಉಡುಪಿ ಜಿಲ್ಲೆ. | **15.03.2023** |

**ಮುಖ್ಯ ವಿಚಾರಣೆಃ** ಮಾನ್ಯ **ಎಪಿಪಿ** ರವರಿಂದಃ

ಮೃತ ಕವಿತಾ ನನ್ನ ಹೆಂಡತಿ ಆಗಬೇಕು.

ದಿನಾಂಕ 12.08.2019 ರಂದು ಬೆಳಿಗ್ಗೆ 10.30 ಗಂಟೆಗೆ ನಾನು ಹಾಗೂ ನನ್ನ ಹೆಂಡತಿ ಮೃತ ಎನ್.ಕವಿತಾರವರು ಮೈಸೂರಿನಲ್ಲಿರುವ ನಮ್ಮ ಮನೆಯನ್ನು ಬಿಟ್ಟು ಮೈಸೂರು-ಬನ್ನೂರು-ಮಳವಳ್ಳಿ ಮಾರ್ಗವಾಗಿ ಶಿವನಸಮುದ್ರಕ್ಕೆ ಹೋಗಲೆಂದು ನಮ್ಮ ದ್ವಿಚಕ್ರ ವಾಹನ ಸಂ.ಕೆಎ-09-ಇಪಿ-3493 ನಲ್ಲಿ ನನ್ನ ಹೆಂಡತಿಯನ್ನು ಹಿಂಬಧಿ ಸವಾರರನ್ನಾಗಿ ಕರೆದುಕೊಂಡು ಮೈಸೂರು ಕಡೆಯಿಂದ ಬನ್ನೂರು ಕಡೆಗೆ ರಸ್ತೆಯ ಎಡಬಧಿಯಲ್ಲಿ ಹೋಗುತ್ತಿರುವಾಗ ಬನ್ನೂರು ಹೋಬಳಿಯ ರಾಮಸ್ವಾಮಿ ನಾಲೆಯ ಹತ್ತಿರ ರಸ್ತೆ ಕಾಮಗಾರಿ ನಡೆಯುತ್ತಿದ್ದು, ನಾನು ನನ್ನ ದ್ವಿಚಕ್ರ ವಾಹನವನ್ನು ನಿಧಾನಗೊಳಿಸಿ, ಕಚ್ಚಾ ರಸ್ತೆಯಿಂದ ಡಾಂಬರ ರಸ್ತೆಗೆ ತೆಗೆದುಕೊಂಡು ಹೋಗುತ್ತಿದ್ದಾಗ ಮೈಸೂರು ಕಡೆಯಿಂದ ಲಾರಿ ಸಂ.ಕೆಎ-02-ಎಬಿ-6629 ನನ್ನು ಅದರ ಚಾಲಕ ಅತಿವೇಗ ಮತ್ತು ಅಜಾಗರೂಕತೆಯಿಂದ ಚಾಲನೆ ಮಾಡಿಕೊಂಡು ಬಂದು ನಮ್ಮ ದ್ವಿಚಕ್ರ ವಾಹನದ ಹಿಂಭಾಗದಲ್ಲಿ ಡಿಕ್ಕಿಪಡಿಸಿದ್ದು, ನಾನು ಹಾಗೂ ನನ್ನ ಹೆಂಡತಿ ದ್ವಿಚಕ್ರ ವಾಹನ ಸಮೇತ ಬಿದ್ದಿದ್ದು, ನಾನು ಎಡಭಾಗದಲ್ಲಿ

ಹಾಗೂ ನನ್ನ ಹೆಂಡತಿ ಬಲಭಾಗದಲ್ಲಿ ಬಿದ್ದಿದ್ದು, ಸದರಿ ಲಾರಿಯ ಮುಂಭಾಗದ ಎಡಚಕ್ರ ನನ್ನ ಹೆಂಡತಿಯ ತಲೆಯ ಮೇಲೆ ಹರಿದು ಹೋಗಿದ್ದು, ಅವರು ಸ್ಥಳದಲ್ಲಿಯೇ ಮೃತಪಟ್ಟಿರುತ್ತಾರೆ. ಸದರಿ ಲಾರಿ ಚಾಲಕ ಅಪಘಾತ ಸ್ಥಳದಿಂದ ಸ್ವಲ್ಪ ಮುಂದೆ ಹೋಗಿ ಲಾರಿಯನ್ನು ಸ್ಥಳದಲ್ಲಿಯೇ ಬಿಟ್ಟು ಓಡಿ ಹೋಗಿರುತ್ತಾನೆ. ಅಪಘಾತದಲ್ಲಿ ನನ್ನ ಬಲಮಂಡಿಗೆ ಗಾಯಗಳಾಗಿರುತ್ತವೆ. ನಂತರ ನನ್ನ ಹೆಂಡತಿಯ ಶವದೊಂದಿಗೆ ನಾವು ಬನ್ನೂರು ಸರ್ಕಾರಿ ಆಸ್ಪತ್ರೆಗೆ ಹೋಗಿರುತ್ತೇವೆ. ನಂತರ ಬನ್ನೂರು ಪೊಲೀಸ ಠಾಣೆಗೆ ಹಾಜರಾಗಿ ಆರೋಪಿ/ ಲಾರಿ ಚಾಲಕನ ವಿರುದ್ಧ ದೂರು ನೀಡಿರುತ್ತೇನೆ.

ಅದೇ ದಿನ ನಾನು ನೀಡಿದ ದೂರಿನ ಆಧಾರದ ಮೇರೆಗೆ ಪೊಲೀಸರು ಅಪಘಾತ ಸ್ಥಳಕ್ಕ ಬಂದಿದ್ದು, ಅಲ್ಲಿ ನಾನು ತೋರಿಸಿದಂತೆ ಚಾಸಾ-2 ಮತ್ತು ಚಾಸಾ-3 ರವರ ಸಮಕ್ಷಮ ಸಂಜೆ 3 ಗಂಟೆಯಿಂದ 4 ಗಂಟೆವರೆಗೆ ಪಂಚನಾಮೆ ಮಾಡಿ ನನ್ನ ದ್ವಿಚಕ್ರ ವಾಹನ ಸಂ.ಕೆಎ-09-ಇಪಿ-3493 ಮತ್ತು ಲಾರಿ ಸಂ.ಕೆಎ-02-ಎಬಿ-6629 ಗಳನ್ನು ಪಂಚನಾಮೆ ಅಡಿ ಜಪ್ತುಪಡಿಸಿಕೊಂಡಿರುತ್ತಾರೆ. ಅಪಘಾತದ ದಿನ ಅಪಘಾತಪಡಿಸಿದ ಲಾರಿ ಚಾಲಕನನ್ನು ನಾನು ನೋಡಿರುವುದಿಲ್ಲ, ಆದರೆ ಮರುದಿನ ಅಪಘಾತಪಡಿಸಿದ ಲಾರಿ ಚಾಲಕನ ಹೆಸರು ಕೆ.ಮಹದೇವ ಎಂದು ಪೊಲೀಸರು ನನಗೆ ತಿಳಿಸಿರುತ್ತಾರೆ. ಈ ಬಗ್ಗೆ ನಾನು ಪೊಲೀಸರಿಗೆ ನನ್ನ ಮರು ಹೇಳಿಕೆ ನೀಡಿರುತ್ತೇನೆ.

ಸಾಕ್ಷಿಗೆ ಈಗ ಒಂದು ದಾಖಲೆಯನ್ನು ತೋರಿಸಿದ್ದು, ಸದರಿ ದಾಖಲೆಯಲ್ಲಿರುವ ತನ್ನ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಸದರಿ ದಾಖಲೆಯು ದೂರು ಆಗಿದ್ದು, ಅದನ್ನು **ನಿಪಿ-1** ಎಂದು, ಸಾಕ್ಷಿಯ ಸಹಿಯನ್ನು **ನಿಪಿ-1 ಎ** ಎಂದು, ಸಾಕ್ಷಿ ಕೃತ್ಯ ಸ್ಥಳ ಹಾಗೂ ಜಪ್ತು ಪಂಚನಾಮೆಯನ್ನು ನೋಡಿ ಗುರುತಿಸಿದ್ದು ಅದನ್ನು **ನಿಪಿ-2** ಎಂದು, ಸಾಕ್ಷಿಯ ಸಹಿಯನ್ನು **ನಿಪಿ-2 ಎ** ಎಂದು ಗುರುತಿಸಲಾಯಿತು. ಸಾಕ್ಷಿಯು ಅಪಘಾತ ಪಡಿಸಿದ ಲಾರಿಯ ಪೋಟೋ ನೋಡಿ ಗುರುತಿಸಿದ್ದು ಅದನ್ನು **ನಿಪಿ-3** ಎಂದು ಹಾಗೂ ಅಪಘಾತಕ್ಕಿಡಾದ ಸಾಕ್ಷಿಯ ದ್ವಿಚಕ್ರ ವಾಹನವನ್ನು **ನಿಪಿ-4** ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ** ಆರೋಪಿ ಪರ ವಕೀಲರು ಸಮಯ ಕೋರಿದ್ದು ಮುಂದೂಡಲಾಯಿತು. ತೆರೆದ ನ್ಯಾಯಾಲಯದಲ್ಲಿ ಈ ಮೇಲೆ ಸಾಕ್ಷಿ ಸ್ವತಃ ಹೇಳಿದ ಸಾಕ್ಷ್ಯವನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು.

ಓ ಹೇ ಕೇ ಸ ಇದೆ.

**ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ.,**

**ತಿ.ನರಸೀಪುರ.**